ವಿಷಯ: ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳ ಸ್ಥಾಪನೆ.

1194 (1682)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರ ಯೋಚಿಸಿದೆ? (ಪೂರ್ಣ ವಿವರ ನೀಡುವುದು).

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಸಲ್ಲಿಸುವಂತೆ ತುಮಕೂರು ಜಿಲ್ಲಾ ಪಂಚಾಯತ್ ಅನ್ನು ಕೋರಲಾಗಿದೆ. ಮಾಹಿತಿ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ: ತುಮಕೂರು ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿ.

1195 (1681)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ಸ್ಕೀಂನಿಂದ ಯಾವ ಯಾವ ತಾಲ್ಲೂಕುಗಳ ರಸ್ತೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ನೀಡಲಾಗಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ತುಮಕೂರು ಜಿಲ್ಲೆಯ ಎಲ್ಲಾ ಹತ್ತು ತಾಲ್ಲೂಕುಗಳಲ್ಲಿನ ರಸ್ತೆ ಅಭಿವೃದ್ಧಿಗಾಗಿ "5054 ಯೋಜನೆ ಹಾಗೂ "3054 ಯೋಜನೇತರ" ಲೆಕ್ಕ ಶೀರ್ಷಿಕೆಗಳಡಿಯಲ್ಲಿ 1997-98ನೇ ಸಾಲಿನಲ್ಲಿ ಅನುಕ್ರಮವಾಗಿ 827.58 ಲಕ್ಷ ರೂ.ಗಳು ಹಾಗೂ 682.44 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. (ತಾಲ್ಲೂಕುವಾರು ವಿವರ ಪ್ರತ್ಯೇಕವಾಗಿ ಅನುಬಂಧದಲ್ಲಿ ನೀಡಿದೆ).

ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಮೇಲ್ದರ್ಜೆಗೇರಿಸಿದ ರಸ್ತೆ	ರಸ್ತೆ ಡಾಂಬರು	ಇತರೆ ರಸ್ತೆ ನಿರ್ಮಾಣ
		ಅನುದಾನ	ಅನುದಾನ	ಅನುದಾನ
1.	ತುಮಕೂರು	-	-	-
2.	ಗುಬ್ಬಿ	-	-	2.70
3.	ಕುಣಿಗಲ್	2.98	2.00	-
4.	ತುರುವೇಕೆರೆ	-	-	6.80
5.	ತಿಪಟೂರು	-	-	21.00
6.	ಚಿಕ್ಕನಾಯಕನ ಹಳ್ಳಿ	-	-	-
7.	ಶಿರಾ	-	-	-
8.	ಕೊರಟಗೆರೆ	-	-	-
9.	ಮಧುಗಿರಿ	-	-	-
10.	ಪಾವಗಡ	-	-	-
	ಒಟ್ಟು	2.98	2.00	30.50

(ಲಕ್ಷ ರೂ.ಗಳಲ್ಲಿ)

ಸೇತುವೆಗಳು	ಶಾಸಕರ ಕಾರ್ಯಕ್ರಮ	ನಬಾರ್ಡ್ ಕಾರ್ಯಕ್ರಮ	ಒಟ್ಟು	3054 ಯೋಜನೇತರ
ಅನುದಾನ	ಅನುದಾನ	ಅನುದಾನ	ಅನುದಾನ	ಅನುದಾನ
-	13.50	49.69	63.19	124.04
0.50	17.50	38.27	59.27	77.20
3.68	13.60	101.29	128.55	71.41
-	10.00	80.06	90.86	62.86
-	7.00	18.90	52.90	38.20
-	14.04	76.02	90.06	54.90
-	11.45	50.72	62.17	105.40
-	-	58.10	58.10	35.58
0.92	7.46	87.47	95.85	55.70
-	7.65	118.98	126.63	57.15
5.75	106.85	679.50	827.58	682.44